**Publication:** Samyukta Karnataka
**Date:** 10/08/2013
**Edition:** Bangalore
**Page No:** 2
**Headline:** Winners of the TCS IT Wiz

# ಟಿಸಿಎಸ್ ಐಟಿ ಕ್ವಿಜ್ ವಿಜೇತರು

ಬೆಂಗಳೂರು, ಆ. 8: ತಂತ್ರಜ್ಞಾನ ಸಂಸ್ಥೆ ಟಿಸಿಎಸ್ ಏರ್ಪಡಿಸಿದ್ದ 'ಟಿಸಿಎಸ್ ಐಟಿ ವಿಜ್' ಬುದ್ಧಿಮತ್ತೆ ಪರೀಕ್ಷೆಯಲ್ಲಿ ನಗರದ ಸೆಂಟ್ ಪಾಲ್ಸ್ ಇಂಗ್ಲಿಷ್ ಸ್ಕೂಲ್ ವಿದ್ಯಾರ್ಥಿಗಳಾದ ಹರಿಕಿರಣ್ ಮತ್ತು ಸಿದ್ಧಾರ್ಥ ಶ್ರೀವತ್ಸ್ ಪ್ರಥಮ ಬಹುಮಾನ ಹಾಗೂ ಶ್ರೀ ಕುಮಾರನ್ ಚಿಲ್ಡ್ರನ್ಸ್ ಹೋಮ್ ವಿದ್ಯಾರ್ಥಿಗಳಾದ ಬಾಲಾಜಿ ಎಂ.ಟಿ. ಮತ್ತು ಅಂಕಿತ್ ಜೆ ರೆಡ್ಡಿ ದ್ವಿತೀಯ ಸ್ಥಾನ ಪಡೆದುಕೊಂಡರು.

ವಿಜೇತ ತಂಡದ ವಿದ್ಯಾರ್ಥಿಗಳಿಬ್ಬರೂ ತಲಾ ಒಂದು ಐಪಾಡ್ ಬಹುಮಾನ ಪಡೆದುಕೊಂಡರೆ, ರನ್ನರ್ ಅಪ್ ಆದ ವಿದ್ಯಾರ್ಥಿಗಳು ಗ್ಯಾಲಕ್ಸಿ ಟ್ಯಾಬ್ಲೆಟ್ ತಮ್ಮದಾಗಿಸಿಕೊಂಡರು. ವಿಜೇತ ತಂಡದ ಇಬ್ಬರೂ ಸ್ಪರ್ಧಿಗಳು 'ಸ್ಮಾರ್ಟ್ ಟೆಕ್ ವಿಜಾರ್ಡ್ 2013' ಸ್ಪರ್ಧೆಯ ಮಹಾ ಅಂತಿಮ ಸುತ್ತಿನ (ಮೆಗಾ ಫೈನಲ್ಸ್) ಸ್ಪರ್ಧೆಯಲ್ಲಿ ಬೆಂಗಳೂರನ್ನು ಪ್ರತಿನಿಧಿಸಲಿದ್ದಾರೆ.

ಇದೇ ವೇಳೆ ನಡೆದ ಬಹುಮಾನ ವಿತರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಖ್ಯಾತ ಅಥ್ಲೀಟ್, ಅರ್ಜುನ ಪ್ರಶಸ್ತಿ ಪುರಸ್ಕೃತೆ ರೀತ್ ಅಬ್ರಹಾಂ ಅವರು ವಿಜೇತ ಸ್ಪರ್ಧಿಗಳಿಗೆ ಬಹುಮಾನ ವಿತರಿಸಿದರು. 'ಟಿಸಿಎಸ್ ಫೈನಾನ್ಷಿಯಲ್ ಸಲ್ಯೂಷನ್ಸ್' ಕಂಪೆನಿಯ ಅಧ್ಯಕ್ಷ ಎನ್.ಜಿ.ಸುಬ್ರಹ್ಮಣ್ಯನ್ ಮತ್ತು 'ಟಿಸಿಎಸ್'ನ ಬೆಂಗಳೂರು ಚಟುವಟಿಕೆಗಳ ಕೇಂದ್ರದ ಮುಖ್ಯಸ್ಥ–ಉಪಾಧ್ಯಕ್ಷರೂ ಆದ ನಾಗರಾಜ್ ಇಜಾರಿ ಮತ್ತು ಟಿಸಿಎಸ್ ಬೆಂಗಳೂರು ಘಟಕದ ಮುಖ್ಯಸ್ಥ ಇ.ಎಸ್.ಚಕ್ರವರ್ತಿ ಸಮಾರಂಭದಲ್ಲಿ ಹಾಜರಿದ್ದರು.

ಇದೇ ಸಂದರ್ಭದಲ್ಲಿ ಸಾಮಾಜಿಕ ಮಾಧ್ಯಮ ಸಂವಹನ ತಂತ್ರಜ್ಞಾನದ ಕಾರ್ಯಕ್ರಮದಡಿ ವಿದ್ಯಾರ್ಥಿಗಳ ನಡುವೆ ತುರುಸಿನ ರಸಪ್ರಶ್ನೆ ಸ್ಪರ್ಧೆ ಕುರಿತು ಪರಸ್ಪರ 'ಟ್ವಿಟ್ಟರ್ ಸ್ಪರ್ಧೆ'ಯೂ ಸಹ ಆಯೋಜಿತವಾಗಿದ್ದಿತು. ಅಂತಿಮ ಸುತ್ತಿನ ರಸಪ್ರಶ್ನೆ ಸ್ಪರ್ಧೆ ನಡೆಯುತ್ತಿದ್ದಾಗಲೇ ಒಟ್ಟು ವಿದ್ಯಾರ್ಥಿಗಳು ಟ್ವೀಟ್ ಮಾಡಿದನ್ನೂ ದಾಖಲಿಸಿಕೊಳ್ಳಲಾಯಿತು.



ನಗರದಲ್ಲಿ ನಡೆದ ಟಿಸಿಎಸ್ ಐಟಿ ಕ್ವಿಜ್ ಸ್ಪರ್ಧೆಯಲ್ಲಿ ವಿಜೇತರಿಗೆ ಖ್ಯಾತ ಅಥ್ಲೀಟ್ ರೀತ್ ಅಬ್ರಾಹಾಂ ಬಹುಮಾನ ವಿತರಿಸಿದರು. ಈ ಸಂದರ್ಭದಲ್ಲಿ. 'ಟಿಸಿಎಸ್ ಫೈನಾನ್ಷಿಯಲ್ ಸಲ್ಯೂಷನ್ಸ್' ಕಂಪೆನಿಯ ಅಧ್ಯಕ್ಷ ಎನ್.ಜಿ.ಸುಬ್ರಹ್ಮಣ್ಯನ್ ಮತ್ತು 'ಟಿಸಿಎಸ್'ನ ಬೆಂಗಳೂರು ಚಟುವಟಿಕೆಗಳ ಕೇಂದ್ರದ ಮುಖ್ಯಸ್ಥ–ಉಪಾಧ್ಯಕ್ಷರೂ ಆದ ನಾಗರಾಜ್ ಇಜಾರಿ ಮತ್ತು ಟಿಸಿಎಸ್ ಬೆಂಗಳೂರು ಘಟಕದ ಮುಖ್ಯಸ್ಥ ಇ.ಎಸ್.ಚಕ್ರವರ್ತಿ ಹಾಜರಿದ್ದರು